ದಿನಾಂಕಃ 08.11.2022
ಓ.ಎಸ್ ಃ 58/2019
ಪಿ ಡಬ್ಲ್ಯೂ ಃ 3

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ.ಆರ್. ರವರಿಂದ ಃ</u>

ನಾನು ಎಸ್.ಎಸ್.ಎಲ್.ಸಿ ರವರೆಗೂ ಓದಿದ್ದೇನೆ. ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ. ಮದ್ದೂರಿನಲ್ಲಿ ಯಾರ ಜಮೀನನ್ನು ವ್ಯಾಪಾರ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಕೊಪ್ಪದಲ್ಲಿ ಲಕ್ಷ್ಮಣ್ ರವರ ಲೇ ಔಟ್ ಇತ್ತು, ಅಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡಿಸಿರುತ್ತೇನೆ. 6 ಲಕ್ಷ ರೂ. ಗೆ ರಾಮ ಎನ್ನುವವರಿಗೆ ರಿಯಲ್ ಎಸ್ಟೇಟ್ ವ್ಯಾಪಾರ ಮಾಡಿರುತ್ತೇನೆ. ನಾನು ಮತ್ತು ರಾಜು ರವರು 15 ವರ್ಷದಿಂದ ಸ್ನೇಹಿತರು. ಮದ್ದೂರು ತಾಲೂಕಿನಲ್ಲಿ ಯಾರ ಜಮೀನನ್ನು ಯಾರಿಗೆ ಕೊಡಿಸಿದ್ದಿರಿ ಎಂದರೆ ಸಾಕ್ಷಿಯು ಪ್ರತಿವಾದಿಗಳು ಟ್ರಾಕ್ಟರ್ ತೆಗೆದುಕೊಳ್ಳಬೇಕು ಎಂದು ಹೊಸಕೆರೆಯಲ್ಲಿ ಅವರು ಹೇಳಿದ್ದು, ಆಗ ಪುಟ್ಟರಾಮುವಿನ ಮೂಲಕ ವಾದಿಯು ಪರಿಚಯ ಆಗಿದ್ದರು. ಪುಟ್ಟರಾಮು ರವರು ಶಿವಪುರದ ಹತ್ತಿರ ವಾಸವಾಗಿರುತ್ತಾರೆ. ನಾನು ಮತ್ತು ರಾಜುರವರು ಯಾವುದೇ ರಿಯಲ್ ಎಸ್ಟೇಟ್ ವ್ಯವಹಾರ ಮಾಡುವುದಿಲ್ಲ ಮತ್ತು ಮದ್ದೂರಿನಲ್ಲಿ ಯಾವುದೇ ರಿಯಲ್ ಎಸ್ಟೇಟ್ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ರಿಯಲ್ ಎಸ್ಟೇಟ್ ಮಾಡುವ ಜ್ಞಾನ ಇರುವುದಿಲ್ಲ ಎಂದರೆ ಸರಿಯಲ್ಲ.

2. ದಾವಾ ಆಸ್ತಿಯ ಸರ್ವೆ ನಂಃ 374/2. 18 ಗುಂಟೆ ಇದ್ದು, ಅದರ ಚೆಕ್ ಬಂದಿ ಗೊತ್ತಿರುವುದಿಲ್ಲ. ದಾವಾ ಆಸ್ತಿಯು 1 ನೇ ಪ್ರತಿವಾದಿಗೆ ಹೇಗೆ ಬಂದಿರುತ್ತದೆ ಎಂದು ಗೊತ್ತಿರುವುದಿಲ್ಲ. ದಾವಾ ಆಸ್ತಿಯು ಪ್ರತಿವಾದಿಗಳಿಗೆ ಹೇಗೆ ಬಂದಿರುತ್ತದೆ ಎಂದು ನಾನು ದಾಖಲೆ ನೋಡಿ ಪರಿಶೀಲನೆ ಮಾಡಿರುವುದಿಲ್ಲ. ಅಕ್ಕಪಕ್ಕದ ಜಮೀನುಗಳ ಬಾಜುದಾರರನ್ನು ವಿಚಾರಿಸಿರುವುದಿಲ್ಲ. ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ಎಷ್ಟು ಇದೆ ಎಂದರೆ ಗುಂಟೆಗೆ 30 ಸಾವಿರ ರೂ. ಇತ್ತು. ಆ ರೀತಿ ಪತ್ರದಲ್ಲಿ ಬರೆದಿರುತ್ತದೆಯಾ ಎಂದರೆ ಸಾಕ್ಷಿಯು 6 ಲಕ್ಷ ಎಂದು ಬರೆದಿರುತ್ತದೆ ಎಂದು ನುಡಿಯುತ್ತಾರೆ. ಕರಾರು ಪತ್ರವನ್ನು ಶ್ರೀನಿವಾಸ್ ವಕೀಲರು ತಹಶೀಲ್ದಾರ್ ಕಚೇರಿಯ ಬಳಿ ಅವರ ಕಚೇರಿಯಲ್ಲಿ

ಬರೆದಿರುತ್ತಾರೆ. 500 ರೂ. ಮುಖ ಬೆಲೆವುಳ್ಳ 6 ಕಟ್ಟನ್ನು ವಾದಿಯು ಪ್ರತಿವಾದಿಗಳಿಗೆ ಕೊಟ್ಟಿರುತ್ತಾರೆ. 1ನೇ ಪ್ರತಿವಾದಿಯು ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು, 2 ನೇ ಪ್ರತಿವಾದಿಯು ಸಹಿ ಮಾಡಿರುತ್ತಾರೆ. ಪತ್ರವನ್ನು ನೊಂದಣಿ ಮಾಡಿರುವುದಿಲ್ಲ ಏಕೆಂದರೆ ಅವರು ದಾಖಲೆಗಳನ್ನು ತಯಾರು ಮಾಡಬೇಕಾಗಿತ್ತು. ನಾನು ದಾಖಲೆಗಳನ್ನು ತಯಾರು ಮಾಡಲು ಹೇಳಿರುತ್ತೆನಾ ಎಂದರೆ ಹೇಳಿರುವುದಿಲ್ಲ. ಕ್ರಯ ಪತ್ರ ಬರೆಸಿಕೊಳ್ಳಲು 3 ವರ್ಷ ಬೇಕು ಎಂದು ಹೇಳಿರುತ್ತಾರೆ. ಪ್ರತಿವಾದಿಗಳು ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರಾ ಎಂದರೆ ಸಾಕ್ಷಿಯು 2ನೇ ಪ್ರತಿವಾದಿಯು ನ್ಯಾಯಾಲಯದಲ್ಲಿ ಹಾಜರಿದ್ದು 1ನೇ ಪ್ರತಿವಾದಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಜಮೀನು ಗೊತ್ತಿರುವುದಿಲ್ಲ, ಪ್ರತಿವಾದಿಗಳು ಗೊತ್ತಿರುವುದಿಲ್ಲ, ಅಂದಾಜಿನ ಮೇಲೆ ನ್ಯಾಯಾಲಯದಲ್ಲಿ ಇರುವ 2 ನೇ ಪ್ರತಿವಾದಿಯನ್ನು ಪ್ರತಾಪ್ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ವಾದಿಯು 3 ಲಕ್ಷ ರೂ. ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ವಾದಿ ಮತ್ತು ರಾಜು ಮತ್ತು ಬಿಕ್ಲಂದಾರರು ಶ್ರೀನಿವಾಸ್ ಸೇರಿಕೊಂಡು ನಿಪಿ 7 ಕ್ಕೆ ಪ್ರತಿವಾದಿಗಳ ಸಹಿ ಮತ್ತು ಹೆಬ್ಬೆಟ್ಟಿನ ಗುರುತನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.